ಕರ್ನಾಟಕ ವಿಧಾನ ಸಭೆ

ಗುರುವಾರ 22ನೇ ಮಾರ್ಚ್ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಎಂ.ವಿ. ವೆಂಕಟಪ್ಪನವರು ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಹಕ್ಕು ಚ್ಯುತಿ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಹಕ್ಕುಚ್ಯುತಿ ನಿರ್ಣಯ ಮಂಡಿಸಿದ್ದೆವು. ದಯಮಾಡಿ ಅದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ನೀಲಕಂಠಪ್ಪನವರೆ, ಪ್ರಶ್ನೋತ್ತರಕ್ಕೂ ಮೊದಲು ಬೇರೆ ಯಾವ ವಿಚಾರವನ್ನು ತೆಗೆದುಕೊಳ್ಳುವುದಿಲ್ಲವೆಂದು ನಿನ್ನೆಯೇ ಹೇಳಿದ್ದೇನೆ. ಹಾಗಿದ್ದರೂ ಅದನ್ನು ಮತ್ತೆ ಏಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಬಿ.ಆರ್.ನೀಲಕಂಠಪ್ಪ: ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆ, ಅವರು ವಿಚಿತ್ರವಾದ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ, ಕಾಂಗ್ರೆಸ್ ಪಕ್ಷದ ಕೈಗೊಂಬೆಯೆಂದು ಹೇಳಿದ್ದಾರೆ. ಮಾನ್ಯ ಸಿಂಧ್ಯಾರವರು, ಬೈರೇಗೌಡರು ಹಾಗೆ ಹೇಳಿದ್ದಾರೆ.

ಅಧ್ಯಕ್ಷರು: ಪ್ರಶ್ನೋತ್ತರವು ಅದಕ್ಕಿಂತ ಮುಖ್ಯವಾದದ್ದು.

ಶ್ರೀ ಕೆ.ಷಡಕ್ಷರಿ: ದಯಮಾಡಿ ಅವರಿಗೆ ಒಂದುಸಲ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು: ತಾವು ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಕೊಟ್ಟಿರುವುದು ನಿಜ. ಆದರೆ ಅದಕ್ಕೆ ನಾನು ನೇರವಾಗಿ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ನಾವು ಮೊದಲು ಪರಿಶೀಲನೆ ಮಾಡಬೇಕಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಹಿಂದೆ ಹೇಗೆ ಕ್ರಮ ತೆಗೆದುಕೊಂಡಿದ್ದಾರೆ, ಹಾಗೂ ಇನ್ನಿತರ ವಿಚಾರಗಳ ಬಗ್ಗೆ ನಾನು ಪರಿಶೀಲನೆ ಮಾಡಬೇಕಾಗಿದೆ. ಅದನ್ನು ಮಾಡದ ಹೊರತು ನಾನು ನೇರವಾಗಿ ಇದಕ್ಕೆ ಅವಕಾಶ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ವೆಂಕಟರಮಣಪ್ಪ: ಅವರು ತಮ್ಮ ಬಗ್ಗೆಯೇ ಕೊಟ್ಟಿರುವುದು. ತಮ್ಮ ಬಗ್ಗೆ ಅವರು ಮಾತನಾಡಿರುವುದರಿಂದ ಅವರು ಕೊಟ್ಟಿರುವುದು. ಆದ್ದರಿಂದ ಅವರಿಗೆ ಅವಕಾಶ ಮಾಡಿ ಕೊಡಿ. ಅಧ್ಯಕ್ಷರು ಕಾಂಗ್ರೆಸ್‌ನವರ ಕೈಗೊಂಬೆಯೆಂದು ಅವರು

ಮಾತನಾಡಿದ್ದಾರೆ, ಅದಕ್ಕಾಗಿ ನಮಗೆ ಅವಕಾಶ ಕೊಡಿಯೆಂದು ಕೇಳುತ್ತಿದ್ದೇವೆ. ತಾವು ಅವಕಾಶ ಕೊಡದಿದ್ದರೆ ಅವರುಗಳು ಹೇಳಿದ್ದನ್ನು ಒಪ್ಪಿಕೊಂಡಂತೆ ಆಗುತ್ತದೆ.

ಅಧ್ಯಕ್ಷರು: ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ. ತಾವು ಈ ರೀತಿ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಡಿ.ಬಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಅವಕಾಶ ಕೊಟ್ಟರೆ ಪರೋಕ್ಷವಾಗಿ ನಮಗೂ ಸಹಸ ಪ್ರಚೋದನೆಯನ್ನು ಕೊಟ್ಟಂತೆ ಆಗುತ್ತದೆ. ಎರಡನೆಯದಾಗಿ, ಸತ್ಯಸಂಗತಿಯು ಸುತ್ತಿ ಬರುವ ಪ್ರವೃತ್ತಿಯಾಗಬಾರದು.

ಅಧ್ಯಕ್ಷರು: ನಾವು ಇಡೀ ಪ್ರಕರಣವನ್ನು ಪರಿಶೀಲನೆ ಮಾಡುತ್ತಿದ್ದೇನೆ. ಈ ಹಿಂದೆಏನೇನು ಆಗಿದೆ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಬೇಕು. ಹಾಗೆ ಮಾಡದೆ ನೇರವಾಗಿ ಅವಕಾಶ ಕೊಡಲು ಆಗುತ್ತದೆಯೇ?

ಶ್ರೀ ಬಿ.ಆರ್. ನೀಲಕಂಠಪ್ಪ: ತಾವು ಪರಿಶೀಲನೆ ಮಾಡಿಯೇ ಅವಕಾಶ ಕೊಡಿ. ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಸದನದ ಕಾಂಗ್ರೆಸ್ ಸದಸ್ಯರುಗಳ ಬಗ್ಗೆ ಆರೋಪ ಮಾಡಿದ್ದಾರೆ.

ಅಧ್ಯಕ್ಷರು: ಆಗಲಿ ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ನೀಲಕಂಠಪ್ಪನವರು, ಅವರ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ, ಸದನಕ್ಕೆ ಅಗೌರವ ಬರುವ ರೀತಿಯಲ್ಲಿ ನಾನು, ಬೈರೇಗೌಡರು, ಸುರೇಶ್‌ಕುಮಾರ್‌ರವರು ಈ ರೀತಿ ಮೂರ್ನಾಲ್ಕು ಜನ ಸದಸ್ಯರು ಮಾತನಾಡಿದ್ದಾರೆಂದು ತಮಗೆ ಪತ್ರವನ್ನು ಕೊಟ್ಟಿದ್ದಾರೆ. ತಾವು ಅದನ್ನು ಇಲ್ಲಿ ಮಂಡಿಸಲು ಅವಕಾಶವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಾವು ಅವಕಾಶ ಕೊಡದಿದ್ದರೆ ನಾಳೆ ದಿವಸ ನಾವು ತಪ್ಪಿತಸ್ಥರೇನೋ ಎಂದು ಪತ್ರಿಕೆಗಳಲ್ಲಿ ವರದಿ ಬರುತ್ತದೆ. ನಿನ್ನೆ ದಿವಸ ಇದೇ ಪ್ರಸಂಗವಾಗಿದೆ. ಅದು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. ನಾವುಗಳು ಏನೋ ತಪ್ಪು ಮಾಡಿಬಿಟ್ಟಿದ್ದೇವೆಯೋ ಎಂಬ ಭಾವನೆ ಬರುತ್ತದೆ. ಆದ್ದರಿಂದ ತಾವು ತಮ್ಮ ಕೊಠಡಿಯಲ್ಲಿ ಅವರನ್ನೂ ಕರೆಸಿ ಅದೇನು ವಿಚಾರವಿದೆಯೋ ಕೇಳಿ, ಕಾನೂನಿನ ಪ್ರಕಾರ ಅವಕಾಶ ಕೊಡಲು ಸಾಧ್ಯವಿದ್ದರೆ ಅವಕಾಶ ಮಾಡಿಕೊಡಿ. ನಾವೂ ಜನಪ್ರತಿನಿಧಿಗಳಾಗಿರುವುದರಿಂದ ನಮ್ಮ ಅಭಿಪ್ರಾಯಗಳನ್ನೂ ಮಂಡಿಸಬೇಕಾಗುತ್ತದೆ.